Akashvani : Bangalore
National Bulletin In Kannada
01.10.2024 / 19.35 hrs
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

- ಭಾರತದ ಆರೋಗ್ಯ, ಶಿಕ್ಷಣ, ಕೃಷಿ ಕ್ಷೇತ್ರದ ಅನುಭವಗಳನ್ನು ಜಮೈಕಾದೊಂದಿಗೆ ಹಂಚಿಕೊಳ್ಳಲು ಸಿದ್ಧ - ಪ್ರಧಾನಿ ನರೇಂದ್ರ ಮೋದಿ
- ಜಮ್ಮು-ಕಾಶ್ಮೀರದಲ್ಲಿ ಶಾಂತಿಯುತವಾಗಿ ಸಂಪನ್ನಗೊಂಡ ವಿಧಾನಸಭಾ ಚುನಾವಣೆ; ಶೇಕಡ ೬೧.೫೮ ರಷ್ಟು ಮತದಾನ ಪ್ರಮಾಣ ದಾಖಲು
- ನೌಕಾಪಡೆಯ 'ನಾವಿಕ್ ಸಾಗರ್ ಪರಿಕ್ರಮದ' ಎರಡನೇ ಆವೃತ್ತಿಗೆ ನಾಳೆ ಚಾಲನೆ
- ಹಿರಿಯ ನಾಗರಿಕರೊಂದಿಗೆ ಕಳೆಯುವ ಕ್ಷಣಗಳನ್ನು ಜನರು ಸಂಭ್ರಮಿಸಬೇಕು- ಸಚಿವ ಡಾ.ವೀರೇಂದ್ರ ಕುಮಾರ್
- ಟೆಸ್ಟ್ ಕ್ರಿಕೆಟ್; ಬಾಂಗ್ಲಾದೇಶ ವಿರುದ್ಧ ಭಾರತಕ್ಕೆ ಸರಣಿ ಜಯ

<><*<><>*><>

ಭಾರತ ಮತ್ತು ಜಮೈಕಾ ನಡುವೆ ಇಂದು ಡಿಜಿಟಲ್ ಮೂಲಸೌಕರ್ಯ, ಸಾಂಸ್ಕೃತಿಕ ವಿನಿಮಯ ಮತ್ತು ಕ್ರೀಡಾ ಕ್ಷೇತ್ರದಲ್ಲಿ ಸಹಕಾರ ಕುರಿತಂತಹ ತಿಳುವಳಿಕಾ ಒಪ್ಪಂದಗಳನ್ನು ವಿನಿಮಯ ಮಾಡಿಕೊಳ್ಳಲಾಯಿತು. ನವದೆಹಲಿಯಲ್ಲಿಂದು ಪ್ರಧಾನಿ ನರೇಂದ್ರ ಮೋದಿ ಹಾಗೂ ಜಮೈಕಾ ಪ್ರಧಾನಿ ಡಾಕ್ಟರ್ ಆಂಡ್ರ್ಯೂ ಹೋಲ್ನೆಸ್ ನಡುವೆ ನಡೆದ ನಿಯೋಗಗಳ ಮಟ್ಟದ ಮಾತುಕತೆಯ ನಂತರ ಈ ತಿಳುವಳಿಕಾ ಒಪ್ಪಂದಗಳನ್ನು ವಿನಿಮಯ ಮಾಡಿಕೊಳ್ಳಲಾಯಿತು. ಬಳಿಕ ನಡೆದ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ಜಮೈಕಾದ ಪ್ರಧಾನಿಯವರ ಭೇಟಿಗೆ ಭಾರತ ವಿಶೇಷ ಪ್ರಾಮುಖ್ಯತೆಯನ್ನು ನೀಡುತ್ತದೆ. ಭಾರತ ಮತ್ತು ಜಮೈಕಾ ಸಂಬಂಧಗಳು ತಮ್ಮ ಇತಿಹಾಸ, ಪ್ರಜಾಸತ್ತಾತ್ಮಕ ಮೌಲ್ಯಗಳು ಮತ್ತು ಬಲವಾದ ಜನರಿಂದ ಜನರ ಸಂಬಂಧಗಳನ್ನು ಆಧರಿಸಿವೆ ಎಂದರು. ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ, ಸಣ್ಣ ಪ್ರಮಾಣದ ಕೈಗಾರಿಕೆಗಳು, ಜೈವಿಕ ಇಂಧನ, ನಾವೀನ್ಯತೆ, ಆರೋಗ್ಯ, ಶಿಕ್ಷಣ ಮತ್ತು ಕೃಷಿಯಂತಹ ಕ್ಷೇತ್ರಗಳಲ್ಲಿ ಜಮೈಕಾದೊಂದಿಗೆ ತನ್ನ ಅನುಭವವನ್ನು ಹಂಚಿಕೊಳ್ಳಲು ಭಾರತ ಸಿದ್ಧವಿದೆ. ರಕ್ಷಣಾ ಕ್ಷೇತ್ರದಲ್ಲಿ ಜಮೈಕಾ ಸೇನೆಯ ತರಬೇತಿ ಮತ್ತು ಸಾಮರ್ಥ್ಯ ವೃದ್ಧಿಯಲ್ಲಿ ಸಹಕಾರವನ್ನು ಭಾರತ ಮುಂದುವರಿಸಲಿದೆ ಎಂದು ಅವರು ಹೇಳಿದರು.

ಧ್ವನಿ: ಪ್ರಧಾನಿ ನರೇಂದ್ರ ಮೋದಿ

ಸಂಘಟಿತ ಅಪರಾಧ, ಮಾದಕವಸ್ತು ಕಳ್ಳಸಾಗಣೆ ಮತ್ತು ಭಯೋತ್ಪಾದನೆ ಉಭಯ ದೇಶಗಳಿಗೆ ಸಾಮಾನ್ಯ ಸವಾಲುಗಳಾಗಿವೆ. ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಸೇರಿದಂತೆ ಎಲ್ಲಾ ಜಾಗತಿಕ ಸಂಸ್ಥೆಗಳಲ್ಲಿ ಸುಧಾರಣೆಗಳು ಅಗತ್ಯವಿರುವ ಕುರಿತಂತೆ ಉಭಯ ರಾಷ್ಟ್ರಗಳ ನಡುವೆ ಒಮ್ಮತದ

ಅಭಿಪ್ರಾಯವಿದೆ ಎಂದರು. ನವದೆಹಲಿಯ ಜಮೈಕಾ ಹೈಕಮಿಷನ್ ಮುಂಭಾಗದ ರಸ್ತೆಗೆ ’ಜಮೈಕಾ ಮಾರ್ಗ’ ಎಂದು ಹೆಸರಿಸಲು ಭಾರತ ಸರ್ಕಾರ ನಿರ್ಧರಿಸಿದೆ ಎಂದು ಇದೇ ವೇಳೆ ಪ್ರಧಾನಿ ತಿಳಿಸಿದರು. ಬಳಿಕ ಮಾತನಾಡಿದ ಜಮೈಕಾದ ಪ್ರಧಾನಿ ಡಾಕ್ಟರ್ ಆಂಡ್ರ್ಯೂ ಹೋಲ್ನೆಸ್, ಜಮೈಕಾ ಭಾರತದೊಂದಿಗೆ ಬಲವಾದ ಸಹೋದರ ಸಂಬಂಧವನ್ನು ಗೌರವಿಸುತ್ತದೆ. ಸುಮಾರು ಎರಡು ಶತಮಾನಗಳಿಂದ ಜಮೈಕಾದಲ್ಲಿ ಭಾರತೀಯರು ಆರೋಗ್ಯ, ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ವ್ಯಾಪಾರ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಜಮೈಕಾದ ಅಭಿವೃದ್ಧಿಗೆ ಕೊಡುಗೆ ನೀಡುತ್ತಿದ್ದಾರೆ ಎಂದು ತಿಳಿಸಿದ್ದಾರೆ.

<><*<><>*><>

ಜಮ್ಮು ಮತ್ತು ಕಾಶ್ಮೀರದಲ್ಲಿಂದು ನಡೆದ ಮೂರನೇ ಮತ್ತು ಕೊನೆಯ ಹಂತದ ವಿಧಾನಸಭಾ ಚುನಾವಣೆಯಲ್ಲಿ ಶೇಕಡ ೬೫.೫೮ ರಷ್ಟು ಮತದಾನವಾಗಿದೆ. ಉತ್ಸಾಹಿ ಮತದಾರರು ತಮ್ಮ ಹಕ್ಕು ಚಲಾಯಿಸಲು ಸರತಿ ಸಾಲಿನಲ್ಲಿ ಮತ ಚಲಾಯಿಸಿದ್ದಾರೆ ಎಂದು ಆಕಾಶವಾಣಿ ಜಮ್ಮು ವರದಿಗಾರರು ವರದಿ ಮಾಡಿದ್ದಾರೆ. ಜಮ್ಮು ವಿಭಾಗದ ಒಟ್ಟು ೨೪ ವಿಧಾನಸಭಾ ಕ್ಷೇತ್ರಗಳಲ್ಲಿ ಜಮ್ಮು ಜಿಲ್ಲೆಯ ಛಂಬ್ ವಿಧಾನಸಭಾ ಕ್ಷೇತ್ರದಲ್ಲಿ ಗರಿಷ್ಠ ಅಂದರೆ, ಶೇಕಡಾ ೭೭.೩೫ ರಷ್ಟು ಹಾಗೂ ಸೋಪೋರ್ ವಿಧಾನಸಭಾ ಕ್ಷೇತ್ರದಲ್ಲಿ ಕನಿಷ್ಠ ಶೇಕಡ ೪೧.೪೪ ರಷ್ಟು ಮತದಾನ ಪ್ರಮಾಣ ದಾಖಲಾಗಿದೆ. ಹಲವು ಕ್ಷೇತ್ರಗಳಲ್ಲಿ ಉತ್ತಮ ಮತದಾನ ಪ್ರಮಾಣ ದಾಖಲಾಗಿದ್ದು, ಅಖ್ನೂರ್ ೭೬.೨೮ ಮಾರ್ಹ್ ೭೬.೧೦, ಗುರೇಸ್ ಕ್ಷೇತ್ರದಲ್ಲಿ ಶೇಕಡ ೭೫.೮೯, ಚೆನಾನಿ ೭೩, ಪೂರ್ವ ಉದಂಪುರ್ ೭೪, ಪಶ್ಚಿಮ ಉದಂಪುರ್ ೭೩, ವಿಜಯ್‌ಪುರ್ ೭೩, ಬಿಷ್ನಾಹ್ ೭೨, ಬನಿ ೭೧, ಕರ್ನಾಹ್ ೬೬, ಟ್ರೆಗಾಮ್ ೬೨, ಕುಪ್ವಾರದಲ್ಲಿ ೫೯, ಜಮ್ಮು ಪಶ್ಚಿಮ ವಿಧಾನಸಭಾ ಕ್ಷೇತ್ರದಲ್ಲಿ ಶೇಕಡಾ ೫೬ ರಷ್ಟು ಮತದಾನ ದಾಖಲಾಗಿದೆ. ಏಳು ಜಿಲ್ಲೆಗಳ ೪೦ ವಿಧಾನಸಭಾ ಕ್ಷೇತ್ರಗಳ ೫ ಸಾವಿರದ ೬೦ ಮತಗಟ್ಟೆಗಳಲ್ಲಿಂದು ಬಿಗಿ ಭದ್ರತೆಯ ನಡುವೆ ಬೆಳಗ್ಗೆ ೭ ಗಂಟೆಗೆ ಮತದಾನ ಆರಂಭವಾಯಿತು. ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳಲು ಎಲ್ಲಾ ಮತಗಟ್ಟೆಗಳಲ್ಲಿ ವೆಬ್‌ಕಾಸ್ಟಿಂಗ್ ಸೌಲಭ್ಯ, ಅಗತ್ಯವಿರುವವರಿಗೆ ವೀಲ್‌ಚೇರ್‌ಗಳ ಜೊತೆಗೆ ಕುಡಿಯುವ ನೀರು, ವಿದ್ಯುತ್, ಶೌಚಾಲಯ, ರಾಂಪ್, ಪೀಠೋಪಕರಣಗಳು ಇತರ ಕನಿಷ್ಠ ಸೌಲಭ್ಯಗಳನ್ನು ಚುನಾವಣಾ ಆಯೋಗ ವ್ಯವಸ್ಥೆ ಮಾಡಿತ್ತು. ೩೭೦ ವಿಧಿ ರದ್ದಾದ ನಂತರ ಇಲ್ಲಿ ಮೊದಲ ಬಾರಿಗೆ ಚುನಾವಣೆ ನಡೆಯುತ್ತಿದೆ. ಸೆಪ್ಟೆಂಬರ್ ೧೮ ಮತ್ತು ಸೆಪ್ಟೆಂಬರ್ ೨೫ ರಂದು ನಡೆದ ಮೊದಲ ಎರಡು ಹಂತದ ವಿಧಾನಸಭಾ ಚುನಾವಣೆಯಲ್ಲಿ ಶೇಕಡಾ ೫೭ ಕ್ಕಿಂತ ಹೆಚ್ಚು ಮತದಾನವಾಗಿದೆ. ಮತಗಳ ಎಣಿಕೆ ಅಕ್ಟೋಬರ್ ೮ ರಂದು ನಡೆಯಲಿದೆ.

<><*<><>*><>

ಭಾರತೀಯ ನೌಕಾಪಡೆ ನಡೆಸುವ ನಾವಿಕ ಸಾಗರ್ ಪರಿಕ್ರಮದ ಎರಡನೇ ಆವೃತ್ತಿಗೆ ನಾಳೆ ಚಾಲನೆ ದೊರೆಯಲಿದೆ. ಭಾರತೀಯ ನೌಕಾಪಡೆಯ ತಾರಿಣಿ ನೌಕೆಯಲ್ಲಿ ಮಹಿಳಾ ಅಧಿಕಾರಿಗಳಾದ ಲೆಫ್ಟಿನೆಂಟ್ ಕಮಾಂಡರ್ ದಿಲ್ನಾ ಕೆ ಮತ್ತು ಲೆಫ್ಟಿನೆಂಟ್ ಕಮಾಂಡರ್ ರೂಪಾ.ಎ ಈ ಐತಿಹಾಸಿಕ ಪ್ರಯಾಣವನ್ನು ಕೈಗೊಳ್ಳಲಿದ್ದಾರೆ. ಎಂಟು ತಿಂಗಳ ಅವಧಿಯಲ್ಲಿ, ಇಬ್ಬರೂ ಅಧಿಕಾರಿಗಳು ಇಪ್ಪತ್ತೊಂದು ಸಾವಿರದ ಆರುನೂರು ನಾಟಿಕಲ್ ಮೈಲುಗಳಿಗಿಂತ ಹೆಚ್ಚು ಸಾಗರ ಪರಿಕ್ರಮ ಕೈಗೊಳ್ಳಲಿದ್ದಾರೆ. ಈ ಸಾಗರ ಪ್ರದಕ್ಷಿಣೆಯು ಅಧಿಕಾರಿಗಳ ಅಸಾಧಾರಣ ಶೌರ್ಯ, ಧೈರ್ಯ ಮತ್ತು ಪರಿಶ್ರಮವನ್ನು ಎತ್ತಿ ತೋರಿಸುತ್ತದೆ. ಕೇಪ್ ಲೀವಿನ್, ಕೇಪ್ ಹಾರ್ನ್ ಮತ್ತು ಕೇಪ್ ಆಫ್ ಗುಡ್ ಹೋಪ್ - ಮೂರು

ಕೇಪ್‌ಗಳ ಸುತ್ತಲಿನ ಅಪಾಯಕಾರಿ ಹಾದಿಯನ್ನು ಅವರ ಪ್ರಯಾಣ ಮಾರ್ಗ ಒಳಗೊಂಡಿದೆ. ಈ ಪ್ರಯಾಣ, ಭಾರತೀಯ ನೌಕಾಪಡೆಯ ನಾರಿ ಶಕ್ತಿಗೆ ಅವರ ಮನೋಭಾವ ಮತ್ತು ನಿರ್ಣಯವನ್ನು ಪ್ರದರ್ಶಿಸುವ ಬದ್ಧತೆಯ ಆಚರಣೆಯಾಗಿದೆ. ೨೦೧೭ ರಲ್ಲಿ ಭಾರತೀಯ ನೌಕಾಪಡೆ ಸಂಘಟಿಸಿದ ಉದ್ಘಾಟನಾ ನವಿಕಾ ಸಾಗರ್ ಪರಿಕ್ರಮ, ಆರು ಮಹಿಳಾ ಅಧಿಕಾರಿಗಳೊಂದಿಗೆ ಸಂಪೂರ್ಣ ಮಹಿಳಾ ಸಿಬ್ಬಂದಿಯೇ ಇರುವ ಜಗತ್ತಿನ ಮೊದಲ ಭಾರತೀಯ ಪರಿಕ್ರಮವಾಗಿದೆ.

<><*<><>*><>

ಜನರು ಹಿರಿಯ ನಾಗರಿಕರೊಂದಿಗೆ ಕಳೆಯುವ ಪ್ರೀತಿಯ ಕ್ಷಣಗಳನ್ನು ಸಂಭ್ರಮಿಸಬೇಕು ಮತ್ತು ಅವರ ಕೊಡುಗೆಗಳನ್ನು ಗೌರವಿಸಬೇಕು ಎಂದು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವ ಡಾ.ವೀರೇಂದ್ರ ಕುಮಾರ್ ಹೇಳಿದ್ದಾರೆ. ನವದೆಹಲಿಯಲ್ಲಿಂದು 'ಅಂತಾರಾಷ್ಟ್ರೀಯ ಹಿರಿಯ ನಾಗರಿಕರ ದಿನ'ದ ಅಂಗವಾಗಿ ನಡೆದ ಸಮಾರಂಭವನ್ನುದ್ದೇಶಿಸಿ ಮಾತನಾಡಿದ ಸಚಿವರು, ಸಮುದಾಯವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸುವ ಹಿರಿಯ ನಾಗರಿಕರ ಘನತೆ, ಗೌರವ ಮತ್ತು ಯೋಗಕ್ಷೇಮಕ್ಕೆ ಆದ್ಯತೆ ನೀಡಬೇಕು ಎಂದರು. ಸರ್ಕಾರ ವೃದ್ಧರ ಕಲ್ಯಾಣಕ್ಕೆ ಬದ್ಧವಾಗಿದೆ. ಮುಂದಿನ ವರ್ಷ ಶಾಲೆಗಳಲ್ಲಿ ಅಂತಾರಾಷ್ಟ್ರೀಯ ಹಿರಿಯರ ದಿನದಂದು ದೊಡ್ಡ ಮಟ್ಟದಲ್ಲಿ ಕಾರ್ಯಕ್ರಮವನ್ನು ಆಯೋಜಿಸಲು ಯೋಜಿಸಲಾಗಿದೆ ಎಂದು ಸಚಿವ ಡಾ.ವೀರೇಂದ್ರ ಕುಮಾರ್ ಹೇಳಿದರು.

<><*<><>*><>

ದೇಶವು ರಕ್ಷಣಾ ಕ್ಷೇತ್ರದಲ್ಲಿ ಸ್ವಾವಲಂಬನೆಯತ್ತ ಸಾಗಿದ್ದು, ವಿಶ್ವದ ರಕ್ಷಣಾ ರಫ್ತುದಾರರಲ್ಲಿ ಗುರುತಿಸಲ್ಪಟ್ಟಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ. ನವದೆಹಲಿಯಲ್ಲಿ ರಕ್ಷಣಾ ಖಾತೆಗಳ ಇಲಾಖೆಯ ೨೭೭ನೇ ವಾರ್ಷಿಕ ದಿನಾಚರಣೆಯನ್ನು ಉದ್ದೇಶಿಸಿ ಮಾತನಾಡಿದ ಸಚಿವರು, ಇಲಾಖೆ ಕಾರ್ಯದಲ್ಲಿ ಅತ್ಯಾಧುನಿಕ ತಂತ್ರಜ್ಞಾನ ಅಳವಡಿಸಿಕೊಂಡಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ರಕ್ಷಣಾ ಲೆಕ್ಕಪತ್ರದಲ್ಲಿ ದಕ್ಷತೆಯನ್ನು ತರುವುದು ರಕ್ಷಣಾ ಖಾತೆಗಳ ಇಲಾಖೆಯ ಉದ್ದೇಶವಾಗಿದೆ ಎಂದು ತಿಳಿಸಿದರು.

<><*<><>*><>

ಇದೇ ೮ ರಂದು ತಾಂಬರಂ ವಾಯುಪಡೆ ನೆಲೆಯಲ್ಲಿ, ವಾಯುಪಡೆಯ ದಿನದ ಪರೇಡ್ ನಡೆಯಲಿದೆ ಎಂದು ಭಾರತೀಯ ವಾಯುಪಡೆಯ ತಾಂಬರಂನ ಏರ್ ಆಫೀಸರ್ ಕಮಾಂಡಿಂಗ್ ಏರ್ ಕಮೋಡೋರ್ ರತೀಶ್ ಕುಮಾರ್ ಹೇಳಿದ್ದಾರೆ. ತಾಂಬರಂ ವಾಯು ಪಡೆ ನೆಲೆಯಲ್ಲಿ ನಡೆದ ಸಂವಾದದಲ್ಲಿ ಏರ್ ಶೋ ಕುರಿತು ಮಾಹಿತಿ ಹಂಚಿಕೊಂಡ ಅವರು, ಅಕ್ಟೋಬರ್ ೬ ರಂದು ಮರೀನಾದಿಂದ ಕೋವಲಂವರೆಗೆ ಚೆನ್ನೈ ಕರಾವಳಿಯಲ್ಲಿ ಭಾರತೀಯ ವಾಯುಪಡೆಯ ೨ ಗಂಟೆಗಳ ಪ್ರದರ್ಶನ ನಡೆಯಲಿದೆ. ಇದೇ ಮೊದಲ ಬಾರಿಗೆ ವಾಯುಪಡೆಯ ದಿನದ ಬೃಹತ್ ಆಚರಣೆಗೆ ಚೆನ್ನೈ ತಾಣವಾಗಿದೆ ಎಂದು ತಿಳಿಸಿದರು. ಅತ್ಯಂತ ಹಳೆಯ ಮತ್ತು ಇತ್ತೀಚಿನ ಅತ್ಯಾಧುನಿಕ ಯುದ್ಧವಿಮಾನಗಳು ಮತ್ತು ಯುದ್ಧ ಹೆಲಿಕಾಪ್ಟರ್‌ಗಳು ಸೇರಿದಂತೆ ೭೨ ವಿಮಾನಗಳು ವೈಮಾನಿಕ ಪ್ರದರ್ಶನದಲ್ಲಿ ಗಮನಸೆಳೆಯಲಿವೆ.

<><*<><>*><>

ಬಿಹಾರದಲ್ಲಿ ಮುಖ್ಯಮಂತ್ರಿ ನಿತೀಶ್ ಕುಮಾರ್ ಇಂದು ರಾಜ್ಯದ ಪ್ರವಾಹ ಪೀಡಿತ ಪ್ರದೇಶಗಳ ವೈಮಾನಿಕ ಸಮೀಕ್ಷೆ ನಡೆಸಿದರು. ಪ್ರಕೃತಿ ವಿಕೋಪದ ಅವಲೋಕನದ ನಂತರ ನಿತಿಶ್ ಕುಮಾರ್, ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಪರಿಹಾರ ಮತ್ತು ಇತರ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಕಾರ್ಯವನ್ನು ತೀವ್ರಗೊಳಿಸುವಂತೆ ಸೂಚಿಸಿದರು. ರಾಜ್ಯದ ೧೬ ಜಿಲ್ಲೆಗಳಲ್ಲಿ ಸುಮಾರು ೧೦ ಲಕ್ಷ ಜನರು ಪ್ರವಾಹದಿಂದ ತೊಂದರೆಗೀಡಾಗಿದ್ದಾರೆ. ಪಶ್ಚಿಮ ಚಂಪಾರಣ್, ಸೀತಾಮರ್ಹಿ, ದರ್ಭಾಂಗ ಮತ್ತು ಪೂರ್ವ ಚಂಪಾರಣ್ ಜಿಲ್ಲೆಗಳು ಹಠಾತ್ ಪ್ರವಾಹದಿಂದ ಹೆಚ್ಚು ಹಾನಿಗೊಳಗಾಗಿವೆ.

**<><*<><>*><>**

ಕಾನ್ಪುರದಲ್ಲಿ ನಡೆದ ಎರಡು ಪಂದ್ಯಗಳ ಸರಣಿಯ, ಎರಡನೇ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಭಾರತವು ಬಾಂಗ್ಲಾದೇಶವನ್ನು ಏಳು ವಿಕೆಟ್‌ಗಳಿಂದ ಸೋಲಿಸಿದೆ. ಈ ಗೆಲುವಿನೊಂದಿಗೆ ಭಾರತ ಎರಡು ಪಂದ್ಯಗಳ ಸರಣಿಯನ್ನು ೨-೦ ಅಂತರದಲ್ಲಿ ಕ್ಲೀನ್‌ಸ್ವೀಪ್ ಮಾಡಿದೆ. ಮೊದಲು ೧೪೬ ರನ್‌ಗಳಿಗೆ ಆಲೌಟ್ ಆದ ಬಾಂಗ್ಲಾ ತಂಡ, ಭಾರತಕ್ಕೆ ೯೫ ರನ್‌ಗಳ ಗುರಿಯನ್ನು ನೀಡಿತ್ತು. ಭಾರತದ ಪರ ರವಿಚಂದ್ರನ್ ಅಶ್ವಿನ್, ರವೀಂದ್ರ ಜಡೇಜಾ, ಜಸ್ಪ್ರೀತ್ ಬುಮ್ರಾ ತಲಾ ಮೂರು ವಿಕೆಟ್ ಪಡೆದರು. ನಂತರ ಭಾರತ ಆಕ್ರಮಣಕಾರಿ ಆಟ ಆರಂಭಿಸಿತಾದರೂ ಆರಂಭಿಕ ಎರಡು ವಿಕೆಟ್‌ಗಳನ್ನು ಕಳೆದುಕೊಂಡಿತು. ಈ ಗೆಲುವಿನೊಂದಿಗೆ ಭಾರತು ೨೦೨೩-೨೦೨೫ರ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್‌ನಲ್ಲಿ ತನ್ನ ಅಗ್ರ ಸ್ಥಾನವನ್ನು ಭದ್ರವಾಗಿಸಿದೆ.

**<><*<>** ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು **<>*><>**

**<><*<>** ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೦೫ ಕ್ಕೆ **<>*><>**